ವಿಜಯ ಕರ್ನಾಟಕ

Saturday, April 3rd, 2010

# ಜೈನ್ ಕಾಲೇಜಿಗೆ ಪ್ರಥಮ ಸ್ಥಾನ

ಪ್ರತಿಷ್ಠಿತ 2010ರ ಎಸ್‌ಎಇ ವೈಮಾನಿಕ ವಿನ್ಯಾಸ ಸ್ಪರ್ಧೆಯಲ್ಲಿ ಶ್ರೀಭಗವಾನ್ ಮಹಾವೀರ್ ಜೈನ್ ಎಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳು ಪ್ರಥಮ ಸ್ಥಾನ ಪಡೆದು ಇತಿಹಾಸ ನಿರ್ಮಿಸಿದ್ದಾರೆ. ಕ್ಯಾಲಿಫೋರ್ನಿಯಾದಲ್ಲಿ ಇತ್ತೀಚೆಗೆ ನಡೆದ ಸ್ಪರ್ಧೆಯಲ್ಲಿ ವಿಶ್ವದ ನಾನಾ ಭಾಗಗಳಿಂದ ಒಟ್ಟು 44 ತಂಡಗಳು ಭಾಗವಹಿಸಿದ್ದವು. ಪ್ರಥಮ ಸ್ಥಾನದ ಜತೆಗೆ, ಹಾರಾಟ ವಿಭಾಗ (ಮೈಕ್ರೊ ಕ್ಲಾಸ್) ದಲ್ಲೂ ಜೈನ್ ಕಾಲೇಜು ತಂಡ ಮೂರನೇ ಸ್ಥಾನ ಪಡೆಯುವಲ್ಲಿ ಸಫಲವಾಯಿತು. ತಂಡದಲ್ಲಿ ಚಂದನ್ ಪ್ರಸಾದ್, ದರ್ಶನ್ ಎನ್.ಆರ್, ಅನುರಾಗ್ ಜೋಶಿ, ಶ್ರೇಯಸ್ ರೆಡ್ಡಿ, ನಿಖಿಲ್ ಪಾಂಡೆ, ಡಿ.ಎಸ್.ಶ್ರೇಯಸ್, ರವಿ ತೇಜ, ಜಾರ್ಜ್ ಮ್ಯಾಥ್ಯೂ ಇದ್ದರು.




ಪ್ರತಿಷ್ಠಿತ 2010ರ ಎಸ್‌ಎಇ ವೈಮಾನಿಕ ವಿನ್ಯಾಸ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಗಳಿಸಿದ ಶ್ರೀಭಗವಾನ್ ಮಹಾವೀರ್ ಜೈನ್ ಎಂಜಿನಿಯರಿಂಗ್ ಕಾಲೇಜಿನ ತಂಡದೊಂದಿಗೆ ಜೈನ್ ವಿಶ್ವವಿದ್ಯಾಲಯದ ಚೆನ್‌ರಾಜ್ ಜೈನ್ ಮತ್ತು ನಿರ್ದೇಶಕ ಡಾ.ವೆಂಕಟೇಶ್.